ಪಿಡಬ್ಲು-1

(ಸಾಕ್ಷಿಯನ್ನು ದಿನಾಂಕ 13-01-2026 ರಂದು ಕರೆಸಿ ಪ್ರಮಾಣೀಕರಿಸಲಾಯಿತು.)

**ಮುಖ್ಯ ವಿಚಾರಣೆಃ ಶ್ರೀ ಎಲ್ ಆರ್ ನಾಯ್ಕ ವಕೀಲರಿಂದಃ,**

ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತದೆ ಎಂದು ಪ್ರಮಾಣೀಕರಿಸುತ್ತೇನೆ.

ಅಪಘಾತಕ್ಕೆ ಸಂಬಂಧಿಸಿದಂತೆ ಪ್ರಥಮ ವರ್ತಮಾನ ವರದಿ ನಿಪಿ-1 ಎಂದು, ದೂರು ನಿಪಿ-2 ಎಂದು, ಸ್ಥಳ ಪಂಚನಾಮೆ ನಿಪಿ-3 ಎಂದು, ದೋಷಾರೋಪಣ ಪಟ್ಟಿ ನಿಪಿ-4 ಎಂದು, ಗಾಯದ ಪ್ರಮಾಣಪತ್ರ ನಿಪಿ-5 ಎಂದು, ಡಿಸಾರ್ಜ ಸಮರಿ ನಿಪಿ-6 ಎಂದು ಗುರುತಿಸಲಾಯಿತು. ಆದ್ದರಿಂದ ಅರ್ಜಿಯನ್ನು ಪುರಸ್ಕರಿಸಬೇಕಾಗಿ ಕೇಳಿಕೊಳ್ಳುತ್ತೇನೆ.

**ಪಾಟೀಸವಾಲುಃ 1 ನೇ ಎದುರುದಾರರನ್ನು ಏಕಪಕ್ಷೀಯವಾಗಿ ತೀರ್ಮಾನಿಸಿರುವುದರಿಂದ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಪಾಟೀಸವಾಲುಃ 2 ನೇ ಎದುರುದಾರರ ಪರ ವಕೀಲರಾದ ಶ್ರೀ ಎಸ್.ಎಂ. ಭಾಗ್ವತರಿಂದಃ**

ನಾನು ಹೋಗುತ್ತಿದ್ದ ಟೆಂಪೋ ಪ್ಯಾಸೆಂಜರ್ ಗಾಡಿ. ನಾನು ಅಳ್ಳಂಕಿಯಿಂದ ಹಡಿನಬಾಳಕ್ಕೆ ಹೋಗುತ್ತಿದ್ದೆ. ನಾನು ಟೆಂಪೋ ಹತ್ತುವ ಮೊದಲೇ ಅದರಲ್ಲಿ ಸುಮಾರು 12 ಜನ ಇದ್ದರು. ಅದು ಹೊನ್ನಾವರಕ್ಕೆ ಬರುತ್ತಿತ್ತು. ನಾನು ಅಳ್ಳಂಕಿಯಲ್ಲಿ ಹತ್ತಿದ ನಂತರ ಮೂಡ್ಕಣಿಯಲ್ಲಿ ಟೆಂಪೋ ನಿಲ್ಲಿಸಿದ್ದು ಅಲ್ಲಿ ಒಬ್ಬರು ಹತ್ತಿದ್ದಾರೆ. ಅಲ್ಲಿಂದ ಮುಂದೆ ಸುಳಗೋಡ ಕ್ರಾಸನಲ್ಲಿ ಒಬ್ಬರು ಹತ್ತಿದ್ದಾರೆ. ರಸ್ತೆಯಲ್ಲಿ ಬರುವಾಗ ಯಾರಾದರೂ ಜನ ಕೈ ತೋರಿಸಿದರೆ ಟೆಂಪೋ ಅಲ್ಲಿ ನಿಲ್ಲಿಸುತ್ತಿತ್ತು, ಜನ ಅಲ್ಲಿ ಹತ್ತುತ್ತಿದ್ದರು. ಟೆಂಪೋ ಮೊದಲು ನಿಧಾನವಾಗಿ ಹೋಗುತ್ತಿತ್ತು. ಖರ್ವಾ ಕ್ರಾಸಗೆ ಬಂದಾಗ ಟೆಂಪೋ ವೇಗವಾಗಿ ಹೊಗುತ್ತಿತ್ತು. ಟೆಂಪೋ ಚಾಲಕ ಟೆಂಪೋವನ್ನು ನಿಧಾನವಾಗಿ ರಸ್ತೆಯ ಎಡಭಾಗದಲ್ಲಿ ಚಲಾಯಿಸಿಕೊಂಡು ಹೋಗುತ್ತಿದ್ದು ಆತನ ತಪ್ಪಿನಿಂದ ಯಾವುದೇ ಅಪಘಾತ ಆಗಿಲ್ಲ ಎಂದರೆ ಸರಿಯಲ್ಲ. ಅಪಘಾತದಿಂದ ನನಗೆ ಯಾವುದೇ ತೀವ್ರಸ್ವರೂಪದ ಗಾಯವಾಗಿಲ್ಲ ಎಂದರೆ ಸರಿಯಲ್ಲ. ಅರ್ಜಿಯಲ್ಲಿ ಮತ್ತು ಪ್ರಮಾಣಪತ್ರದಲ್ಲಿ ಬರೆದಷ್ಟು ದಿನ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿಲ್ಲ ಎಂದರೆ ಸರಿಯಲ್ಲ. ಅರ್ಜಿಯಲ್ಲಿ ಮತ್ತು ಪ್ರಮಾಣಪತ್ರದಲ್ಲಿ ಬರೆದಷ್ಟು ಹಣ ಚಿಕಿತ್ಸೆಗೆ ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. ನನಗೆ ಆದ ಗಾಯಗಳಿಂದ ಯಾವುದೇ ಅಂಗನ್ಯೂನತೆ ಉಂಟಾಗಿಲ್ಲ ಎಂದರೆ ಸರಿಯಲ್ಲ. ನನಗೆ ಆದಾಯದಲ್ಲಿ ಯಾವುದೇ ನಷ್ಟ ಉಂಟಾಗಿಲ್ಲ ಎಂದರೆ ಸರಿಯಲ್ಲ. ನಾನು ಪಂಚಾಯತಿಯಲ್ಲಿ ಕೆಲಸ ಮಾಡುತ್ತಿದ್ದೇನೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನಗೆ ತಿಂಗಳಿಗೆ ರೂ.15,000-00 ಆದಾಯ ಬರುತ್ತಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈಗ ನನಗೆ ಕೆಲಸ ಮಾಡಲು ಆಗುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತದಿಂದ ಆದ ಗಾಯಗಳಿಗೆ ಈಗಲೂ ಚಿಕಿತ್ಸೆ ಪಡೆಯುತ್ತಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಿಕಿತ್ಸೆಯ ಸಮಯದಲ್ಲಿ ನನ್ನನ್ನು ನೋಡಿಕೊಳ್ಳಲು ಒಬ್ಬರನ್ನು ನೇಮಿಸಿಕೊಂಡಿದ್ದೆ

**ಪಿಡಬ್ಲ್ಯು-1**

ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತದ ಸಮಯದಲ್ಲಿ ನನಗೆ 55 ವರ್ಷಕ್ಕಿಂತ ಹೆಚ್ಚು ವಯಸ್ಸಾಗಿತ್ತು ಎಂದರೆ ಸರಿಯಲ್ಲ. ಪರಿಹಾರ ಹೆಚ್ಚಿಗೆ ಪಡೆಯಲು ವಯಸ್ಸಿನ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಟೆಂಪೋ ಚಾಲಕನಿಗೆ ಸೂಕ್ತ ಚಾಲನಾ ಪರವಾನಿಗೆ ಇರಲಿಲ್ಲ ಎಂದರೆ ಸರಿಯಲ್ಲ. ಟೆಂಪೋಗೆ ಪರ್ಮಿಟ್ ಮತ್ತು ಫಿಟನೆಸ್ ಇರಲಿಲ್ಲ ಎಂದರೆ ಸರಿಯಲ್ಲ. ಟೆಂಪೋದಲ್ಲಿ ನಿಗದಿತಕ್ಕಿಂತ ಜಾಸ್ತಿ ಜನ ಇದ್ದು ಟೆಂಪೋ ಮಾಲಿಕ ವಿಮಾ ಶರತ್ತನ್ನು ಉಲ್ಲಂಘಿಸಿರುವುದರಿಂದ ವಿಮಾ ಕಂಪನಿಯವರು ಯಾವುದೇ ಪರಿಹಾರ ನೀಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

Sd/-

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**